# ವಸಂತ ಋತುವಿನ ರಾಯಭಾರಿ

**ಚೈತ್ರದ ಆಗಮನವನ್ನು ಸಂಭ್ರಮದಿಂದ ಸಾರಿ ಹೇಳುವಂತೆ ಸ್ವೀಡನ್‌ನ ಹೂರ್ನ್ಬೋರ್ಗ ಸರೋವರಕ್ಕೆ ಬಂದಿಳಿಯುವ ಬಕ ಪಕ್ಷಿಗಳನ್ನು ಕಂಡರೆ ಇಲ್ಲಿನವರಿಗೆ ವಿಶೇಷ ಅಕ್ಕರೆ. ದಣಿವಾರಿಸಿಕೊಳ್ಳಲು ಕೆಲದಿನ ಇಲ್ಲೇ ಜಾಂಡಾ ಊರುವ ಈ ಹಕ್ಕಿಗಳನ್ನು ನೋಡಲು ಜನರು ಎಲ್ಲೆಲ್ಲಿಂದಲೋ ಬರುತ್ತಾರೆ.**

**■ ಸುಚೇತಾ ಕೆ. ನಾರಾಯಣ್**

ಸ್ವೀಡನ್ ದೇಶದ ದಕ್ಷಿಣದಲ್ಲಿರುವ ಒಂದು ಪುಟ್ಟ ಕೆರೆ ಹೂರ್ನ್ಬೋರ್ಗ (**Hornborga**). ಚಳಿಗಾಲದಲ್ಲಿ ಕೊರೆಯುವ ಶೀತಗಾಳಿ, ಸುರಿಯುವ ಹಿಮ, ಶೂನ್ಯಕ್ಕಿಂತ ಕೆಳಗಿರುವ ಉಷ್ಣತೆಯಿಂದ ನೆಲವೆಲ್ಲ ಹೆಪ್ಪುಗಟ್ಟಿ ಜೀವಂತಿಕೆಯ ಸೆಲೆಯೇ ಇಲ್ಲದಂತೆ ತಟಸ್ಥವಾಗಿರುತ್ತದೆ ಈ ಜಾಗ.



ಆದರೆ ಇನ್ನೇನು ಇದೋ ವಸಂತ ಋತು ಬಂದೇ ಬಿಟ್ಟಿತು ಎನ್ನುವಷ್ಟರಲ್ಲಿ ಮಂಜುಗಟ್ಟಿದ ನೀರು ಕರಗಿ, ನೆಲದ ಒಡಲಿನಿಂದ ಚಿಗುರೆಲೆಗಳು ತಲೆಯೆತ್ತಿ, ಹೂಗಳಿಂದ ತೂಗುತ್ತವೆ. ಬಣ್ಣಬಣ್ಣದ ನೀರಿನ ಹಕ್ಕಿಗಳು, ಜವುಗಿನ ಹಕ್ಕಿಗಳು ಇಲ್ಲಿ ನೆರೆಯುತ್ತವೆ. ಜೊತೆಗೆ ಯುರೇಷಿಯನ್ ಕ್ರೇನ್ ಎಂದು ಕರೆಯಲ್ಪಡುವ ದೊಡ್ಡ ಗಾತ್ರದ ಬಕ ಪಕ್ಷಿಗಳು ಸಾವಿರಾರು ಸಂಖ್ಯೆಯಲ್ಲಿ ಆಗಮಿಸುತ್ತವೆ.

ಫೆಬ್ರುವರಿ ತಿಂಗಳು ಕಳೆಯುತ್ತ ಬಂದಂತೆ ಹಗಲು ಹೆಚ್ಚಾಗುವುದು ನಿಚ್ಚಳವಾಗಿ ಕತ್ತಲ ವೇಳೆಗಳು ಕಡಿಮೆಯಾಗುತ್ತವೆ. ಚಳಿ ನಿಧಾನವಾಗಿ ಇಳಿಮುಖವಾಗತೊಡಗುತ್ತದೆ. ವಸಂತ ಋತುವಿನ ಆಗಮನವನ್ನು ತಿಳಿಸಲೋಸುಗವೆಂಬಂತೆ ಮೊದಲ ಬಕ ಪಕ್ಷಿ ಈ ಕೆರೆಯಲ್ಲಿ ಬಂದಿಳಿಯುತ್ತದೆ. ಕೋಳಿ ಕೂಗಿನಿಂದ ಬೆಳಗಾಯ್ತೆಂಬಂತೆ, ಈ ಹಕ್ಕಿಯ ಆಗಮನದಿಂದ ವಸಂತ ಬಂತೆಂದು ಜನರು ಸಂಭ್ರಮಿಸುತ್ತಾರೆ. ಇದು ಮುಖ್ಯ ಸುದ್ದಿಯಾಗಿ ವಾರ್ತೆಗಳಲ್ಲೂ ಬಿತ್ತರವಾಗುತ್ತದೆ.

ದಿನಗಳು ಕಳೆದಂತೆ ಸಾವಿರಾರು ಬಕಪಕ್ಷಿಗಳು ಸಾಲುಸಾಲಾಗಿ ಹೂರ್ನ್ಬೋರ್ಗ ಕೆರೆಯ ದಕ್ಷಿಣದ ತುದಿಯಲ್ಲಿ ನೆರೆಯುತ್ತವೆ. ಇವು ತಮ್ಮ ವಿಶೇಷ ಹಾವಭಾವದಿಂದ ಪುಕ್ಕಗೆದರಿ, ರೆಕ್ಕೆಗಳನ್ನು ಅಗಲಿಸಿ, ಕತ್ತನ್ನೆತ್ತಿ ಸದ್ದನ್ನು ಹೊರಡಿಸುತ್ತಾ ಮೇಲೆ ಕೆಳಗೆ ಹಾರುತ್ತಾ ಸಂಗಾತಿಯನ್ನು ಆಕರ್ಷಿಸುತ್ತವೆ. ಈ ದೃಶ್ಯ ನೋಡಲಂತೂ ನಯನಮನೋಹರ. ಇದು ಅವುಗಳ ಮಧ್ಯ ಇರುವ ಬಂಧವನ್ನು ಗಟ್ಟಿಗೊಳಿಸುತ್ತದೆಯಂತೆ. ಎಲ್ಲೋ ಬೆರಳೆಣಿಕೆಯಷ್ಟು ಹಕ್ಕಿಗಳು ಮಾತ್ರವೇ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಹೆಚ್ಚಿನವು ಉತ್ತರದ ಪ್ರದೇಶಗಳಿಗೆ ತಮ್ಮ ಪ್ರಯಾಣ ಮುಂದುವರೆಸುತ್ತವೆ.

ಯೂರೋಪಿನ ದಕ್ಷಿಣ ಭಾಗಗಳಿಂದ ಸಂತಾನಾಭಿವೃದ್ಧಿಗಾಗಿ ಉತ್ತರದ ದೇಶಗಳಿಗೆ ವಲಸೆ ಬರುವ ಬಕಗಳು ದಣಿವಾರಿಸಿಕೊಳ್ಳಲು ಈ ಜಾಗವನ್ನು ಆರಿಸಿಕೊಂಡಿವೆ. ಕೆಲ ದಶಕಗಳ ಹಿಂದಿನವರೆಗೂ ಕೆರೆಯ ಸುತ್ತಮುತ್ತಲಿನ ಹೊಲಗಳಲ್ಲಿ ಆಲೂಗಡ್ಡೆಗಳನ್ನು ಬೆಳೆಯಲಾಗುತ್ತಿತ್ತು. ಇಲ್ಲಿ ಕಲೆಯುತ್ತಿದ್ದ ಪಕ್ಷಿಗಳಿಗೆ ಅದು ಮುಖ್ಯವಾದ ಆಹಾರವಾಗಿತ್ತು. ಕ್ರಮೇಣ ಜನರು ಕೃಷಿ ಮೇಲಿನ ಅವಲಂಬನೆ ಕಡಿಮೆ ಮಾಡಿ ಬೇರೆ ಬೇರೆ ಉದ್ಯೋಗಗಳನ್ನು ಆಶ್ರಯಿಸಿದ್ದರಿಂದ ಕಾಲ ಕಳೆದಂತೆ ಇಲ್ಲಿ ಬಂದಿಳಿಯುವ ಬಾನಾಡಿಗಳೂ ಕಡಿಮೆಯಾಗತೊಡಗಿದವು.

ಆದರೆ ಚೈತ್ರದ ಆಗಮನದ ಸಂದೇಶ ಹೊತ್ತು ತರುವ ಈ ಬಕಪಕ್ಷಿಗಳ ಮೇಲೆ ಅಲ್ಲಿನ ಜನರಿಗೆ ವಿಶೇಷ ಮಮತೆ. ಹಾಗಾಗಿ ಮೂಟೆಗಟ್ಟಲೆ ದವಸ ಧಾನ್ಯಗಳನ್ನು ಕೆರೆಯ ಸುತ್ತಮುತ್ತಲಿನ ಜಾಗಗಳಲ್ಲಿ ಸುರಿಯತೊಡಗಿದರು. ಈ ಪರಿಪಾಟ ಮುಂದುವರೆದಂತೆ ಪಕ್ಷಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗತೊಡಗಿತು. ಈಗಲೂ ಪ್ರತಿನಿತ್ಯವೂ ಚೀಲಗಟ್ಟಲೆ ಬಾರ್ಲಿಯನ್ನು ಇಲ್ಲಿ ಚೆಲ್ಲಲಾಗುತ್ತದೆ. ಹಾಗಾಗಿ ಹೂರ್ನ್ಬೋರ್ಗ ಸರೋವರ ವಲಸೆ ಹಕ್ಕಿಗಳ ನೆಚ್ಚಿನ ತಂಗುದಾಣವಾಗಿದೆ.

ಮಾರ್ಚ್ ತಿಂಗಳ ಅಂತ್ಯದಲ್ಲಿ ಹಾಗೂ ಏಪ್ರಿಲ್ ತಿಂಗಳ ಮೊದಲ ವಾರ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಬೂದು ಬಕಗಳನ್ನು ಕಾಣಬಹುದು. ದಿನವೂ ಸಂಜೆ ವೇಳೆಗೆ ಇವು ಕೆರೆಯನ್ನು ತೊರೆದು ಗುಂಪುಗುಂಪಾಗಿ ನಿದ್ರಿಸಲು ಮರಳುವ ಹೊತ್ತಿಗೆ ಎಣಿಕೆ ಮಾಡಲಾಗುತ್ತದೆ. ಕೆಲ ದಿನಗಳಲ್ಲಿ 10000 ದಿಂದ 25000ರವರೆಗೂ ಬಕ ಪಕ್ಷಿಗಳು ದಾಖಲಾಗುತ್ತವೆ.

ಇಲ್ಲಿ ನಡೆಯುವ ಅಪೂರ್ವ ಸನ್ನಿವೇಶವನ್ನು ಕಣ್ತುಂಬಿಕೊಳ್ಳಲು ಎಲ್ಲೆಲ್ಲಿಂದಲೋ ಪಕ್ಷಿ ವಿಜ್ಞಾನಿಗಳು, ಪಕ್ಷಿ ವೀಕ್ಷಕರು, ಪಕ್ಷಿ ಪ್ರೇಮಿಗಳೆಲ್ಲ ಆಗಮಿಸುತ್ತಾರೆ. ಈ ಬಕ ಪಕ್ಷಿಗಳನ್ನು ನೋಡಲೆಂದು ನಾವೂ ಅಲ್ಲಿನ ನಮ್ಮ ಗೆಳೆಯರೊಂದಿಗೆ ಹೊರಟೆವು. ಆ ಗೆಳೆಯರಿಬ್ಬರು ಅರವತ್ತರ ಆಸುಪಾಸಿನಲ್ಲಿದ್ದರೂ ಎಳೆಯರ ಜೊತೆಗೆ ಎಳೆಯರೇ ಆಗಿ ನಮ್ಮ ಗೆಳೆಯರಾಗಿದ್ದವರು.

ಎಲ್ಲರೂ ಒಟ್ಟಾಗಿ ಹೂರ್ನ್ಬೋರ್ಗ ಕೆರೆ ತಲುಪಿದಾಗ ಇಳಿ ಮಧ್ಯಾಹ್ನವಾಗಿತ್ತು.ಕಾರ್ ನಿಲ್ಲಿಸಿ ಕೆಳಗಿಳಿಯುವುದರೊಳಗೆ ಬಕಪಕ್ಷಿಗಳ ಕೇಕೆ ನಮ್ಮ ಕಿವಿಗಳನ್ನು ತಲುಪಿತ್ತು. ಅಷ್ಟೊಂದು ಸಾವಿರ ಖಗ ಸಮೂಹವನ್ನು ನಾನು ನೋಡಿದ್ದು ಅದೇ ಮೊದಲು. ಕೆಲವೇ ಅಡಿಗಳಷ್ಟು ದೂರದಲ್ಲಿದ್ದ, ಕೈಚಾಚಿದರೆ ಸಿಕ್ಕಾವು ಎಂಬಂತಿದ್ದ ಇವುಗಳನ್ನು ನೋಡಲು ದುರ್ಬೀನಿನ ಅವಶ್ಯಕತೆಯೇ ಇರಲಿಲ್ಲ. ಕೆರೆಯ ಉದ್ದಕ್ಕೂ ಓಡಾಡಿ ಅಲ್ಲಿ ನೆರೆದಿದ್ದ ಹಲವಾರು ಪಕ್ಷಿ ಪ್ರಭೇದಗಳನ್ನು ಗುರುತಿಸಿದೆವು. ಕೆನಡಾ ಗೂಸ್, ಹೂಪರ್ ಸ್ವಾನ್, ನಾರ್ಥನ್ ಲ್ಯಾಪ್‌ವಿಂಗ್, ಗ್ರೇ ಲ್ಯಾಗ್ ಗೂಸ್, ವಿಜನ್, ಗಾರ್ಗನಿ, ಶೋವೆಲರ್ ಮುಂತಾದ ನೀರಿನ ಹಕ್ಕಿಗಳನ್ನು ಅಲ್ಲಿ ಕಾಣಬಹುದಾಗಿತ್ತು. ನಂತರ ಅಲ್ಲಿನ ಮಾಹಿತಿ ಕೇಂದ್ರದಲ್ಲಿನ ಕೆಫೆಯಲ್ಲಿ ದೊರೆತ ಬಿಸಿಬಿಸಿ ಕಾಫಿ ಹಿಡಿದು ಮುಸ್ಸಂಜೆಯ ಚಳಿಯಲ್ಲಿ ಹಕ್ಕಿಗಳು ಗುಂಪುಗುಂಪಾಗಿ ಮಲಗಲು ಹೊರಟದ್ದನ್ನು ನೋಡಿದೆವು. ಆ ದೃಶ್ಯ, ಕುವೆಂಪುರವರ, 'ದೇವರು ರುಜು ಮಾಡಿದನು' ಎಂಬ ಪದ್ಯವನ್ನು ನೆನಪು ಮಾಡಿತ್ತು. ■

